**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 101/2018**

| | | | |
|---|---|---|---|
| **ಹೆಸರು** | **:** | **ಶಿವಾನಂದ** | **ಚಾ.ಸಾ.14** |
| **ಗಂಡನ ಹೆಸರು** | **:** | **ಬಸಯ್ಯ** | **ಪ್ರಾ.ಸಾ.15** |
| **ವಯಸ್ಸು** | **:** | **35 ವರ್ಷ** | **ದಿನಾಂಕಃ 04-12-2023** |
| **ಉದ್ಯೋಗ** | **:** | **ಖಾಸಗಿ ಕೆಲಸ** | |
| **ವಾಸಸ್ಥಳ** | **:** | **ರಾಯಕೋಡ್** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಪ್ರಾಸಾ-3 ನನ್ನ ತಂಗಿ. ಚಾಸಾ-17 ಮತ್ತು 18 ರವರು ನನಗೆ ಗೊತ್ತು. ಚಾಸಾ-12 ನನ್ನ ತಂದೆ. ಪ್ರಾಸಾ-6 ನನ್ನ ತಾಯಿ. ಉಳಿದ ಸಾಕ್ಷಿದಾರರು ನನಗೆ ಗೊತ್ತು. 1 ನೇ ಆರೋಪಿ ನನ್ನ ತಂಗಿಯ ಗಂಡ. ಈ ದಿನ ನ್ಯಾಯಲಯದ ಮುಂದೆ ಇರುವ 1 ನೇ ಆರೋಪಿ ನನ್ನ ತಂಗಿಯ ಗಂಡ. 2 ರಿಂದ 4 ನೇ ಆರೋಪಿತರು ನನಗೆ ಗೊತ್ತು.

2016 ರಲ್ಲಿ ಪ್ರಾಸಾ-3 ರವರ ಮದುವೆ 1 ನೇ ಆರೋಪಿಯ ಜೊತೆ ಶಿವಲಿಂಗೇಶ್ವರ ಮಠದಲ್ಲಿ ಆಗಿರುತ್ತದೆ. ಮದುವೆಯಾಗಿ 1-2 ತಿಂಗಳುಗಳ ಕಾಲ ಚನ್ನಾಗಿಯೆ ಇದ್ದು ನಂತರ 1 ನೇ ಆರೋಪಿ ನನಗೆ ರಾತ್ರಿ ಸಮಯಕ್ಕೆ ಕರೆ ಮಾಡಿ ನಿನ್ನ ತಂಗಿ ಹಾಗೇ ಹೀಗೆ ಎಂದು ಅವಾಚ್ಯವಾಗಿ ಬೈದು ನಿಮ್ಮ ತಂಗಿಗೆ ಕರೆದುಕೊಂಡು ಹೋಗಿ ಎಂದು ಬೈದಿರುತ್ತಾನೆ. ಆದ್ದರಿಂದ ನಾನು, ಪ್ರಾಸಾ-2, ಪ್ರಾಸಾ-12, ಮತ್ತು ಇನ್ನಿತರರು ಸೇರಿ 1 ನೇ ಆರೋಪಿಗೆ ತಿಳಿ ಹೇಳಿದರು 1 ನೇ ಆರೋಪಿ ನನ್ನ ಸಮಕ್ಷಮವೇ ನನ್ನ ತಂಗಿಗೆ 2-3 ಬಾರಿ ಒದ್ದಿರುತ್ತಾನೆ. ಘಟನೆಗಿಂದ ಮೊದಲು ನಾವು ಪೋಲಿಸ ಠಾಣೆಗೆ ಹೋದಾಗ ಪೋಲಿಸರು 1 ನೇ ಆರೋಪಿಗೆ ತಿಳಿ ಹೇಳಿದರು ಸಹ 1 ನೇ ಆರೋಪಿ ಬದಲಾಗಿರುವುದಿಲ್ಲ. 2017 ರಲ್ಲಿ ನನ್ನ ಮದುವೆಗೆ ನನ್ನ ತಂಗಿ ಮನೆಗೆ ಬಂದಾಗ 1 ನೇ ಆರೋಪಿ ನನ್ನ ತಂಗಿಗೆ 5 ತೋಲೆ ಬಂಗಾರ ಪಡೆದುಕೊಂಡು ಬಂದರೆ ಮಾತ್ರ ಮನೆಗೆ ಬಾ ಇಲ್ಲ ಎಂದರೆ ಬರಬೇಡ ಎಂದು ತಿಳಿಸಿರುತ್ತಾನೆ.

ನಾನು ಬೀದರನಲ್ಲಿ ಇದ್ದಾಗ ನನ್ನ ತಾಯಿ ನನಗೆ ಕರೆಮಾಡಿ ಒಬ್ಬ ರುದ್ರನೂರಿನ ವ್ಯಕ್ತಿ ಬಂದು ನನ್ನ ತಂದೆ ತಾಯಿಗೆ ನನ್ನ ತಂಗಿ ನೇಣು ಹಾಕಿಕೊಂಡಿದ್ದಾಳೆ ಎಂದು ತಿಳಿಸಿದ ಕಾರಣ ಬೀದರನಿಂದ

ನಾನು ಸೇಡಂ ಸರಕಾರಿ ಆಸ್ಪತ್ರೆಗೆ ಹೋಗಿ ನೋಡಿದಾಗ ನನ್ನ ತಂಗಿಗೆ ಪ್ರಜ್ಞೆ ಇರಲಿಲ್ಲ. ನನ್ನ ತಂಗಿಯ ಕುತ್ತಿಗೆಯ ಭಾಗಕ್ಕೆ ಬಣ್ಣ ಬದಲಾಗಿತ್ತು. ಪ್ರಜ್ಞೆ ಬಂದ ಮೇಲೆ ನನ್ನ ತಂಗಿ ನಮಗೆ ತಿಳಿಸಿದ್ದು ಏನೆಂದರೆ 1 ಮತ್ತು 2 ನೇ ಆರೋಪಿತರು ನನ್ನ ತಂಗಿಗೆ ಒಡಣಿಯಿಂದ ನೇಣು ಹಾಕಲು ಪ್ರಯತ್ನ ಪಟ್ಟಿದ್ದರು ಹಾಗೂ 3 ಮತ್ತು 4 ನೇ ಆರೋಪಿತರು ಪ್ರಚೋದನೆ ನೀಡುತ್ತಿದ್ದರು ಎಂದು ತಿಳಿಸಿರುತ್ತಾರೆ. ನಂತರ ನನ್ನ ತಂಗಿ ಒಂದು ಕಾಗದ ಮೇಲೆ ಘಟನೆ ಬಗ್ಗೆ ಬರೆದು ನನಗೆ ಕೊಟ್ಟಿರುತ್ತಾಳೆ. ಸದರಿ ಕಾಗದವನ್ನು ನಾನು ಸುಲೇಪೇಟ ಪೋಲಿಸ ಠಾಣೆಗೆ ಹೋಗಿ ಸಲ್ಲಿಸಿರುತ್ತೇನೆ. ಸದರಿ ದಾಖಲೆ ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ. ನಿಪಿ-3 ರಲ್ಲಿರುವ ನನ್ನ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ನಾನು ದಿನಾಂಕ 12-10-2017 ರಂದು ನೀಡಿರುತ್ತೇನೆ. ದಿನಾಂಕ 14-10-2017 ರಂದು ಪೋಲಿಸರಿ ಹೇಳಿಕೆಯನ್ನು ನೀಡಿದ್ದೇನೆ.

ಮನೆ ಕಟ್ಟಲು ಹಣ ಬೇಕು ಎಂದು ಮತ್ತು ಬಂಗಾರ ತರಬೇಕು ಎಂದು 1 ನೇ ಆರೋಪಿ ಪ್ರಾಸಾ-3 ರವರಿಗೆ ಕಿರುಕುಳ ನೀಡುತ್ತಾ ಬಂದಿರುತ್ತಾನೆ ಮತ್ತು ಬೇರೆ ಮದುವೆಯಾದರೆ ಜಾಸ್ತಿ ವರದಕ್ಷಿಣೆ ಬರುತ್ತಿತ್ತು ಎಂದು ಪ್ರಾಸಾ-3 ರವರು ನನಗೆ ತಿಳಿಸಿದ್ದಾರೆ. ಈ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ ಸದರಿ ಭಾವಚಿತ್ರವನ್ನು ನಿಪಿ-11 ಎಂದು ಗುರುತಿಸಲಾಯಿತು. ನಿಪಿ-11 ರ ಭಾವಚಿತ್ರವನ್ನು 1 ನೇ ಆರೋಪಿಯ ಮನೆ ಹತ್ತಿರ ಘಟನೆಯಾದ ಮರುದಿನ ಪಡೆದುಕೊಂಡಿದ್ದಾರೆ. ದೂರು ನೀಡಿದ ನಂತರ ನಿಪಿ-11 ರ ಭಾವಚಿತ್ರವನ್ನು ಪೋಲಿಸರು ಪಡೆದುಕೊಂಡಿದ್ದಾರೆ. ನಿಪಿ-11 ರ ಭಾವಚಿತ್ರವನ್ನು ಪೋಲಿಸರು ವಿಚಾರಣೆ ಸಮಯಕ್ಕೆ ಪಡೆದುಕೊಂಡಿದ್ದಾರೆ ಆಗ ಯಾರು ಇದ್ದರು ಎಂದು ನನಗೆ ನೆನಪಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಎನ್.ಬಿ. ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**